**ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

**ವಿಷಯ ಸಂಕೇತ : 260**

**ಪ್ರಶ್ನೆ ಪುಸ್ತಿಕೆ ಶ್ರೇಣಿ**

**A**

# ಪ್ರಶ್ನೆ ಪುಸ್ತಿಕೆ
# ನಿರ್ದಿಷ್ಟ ಪತ್ರಿಕೆ
# (ಪತ್ರಿಕೆ II)

***ಸಮಯ : 2 ಗಂಟೆಗಳು*** ***ಗರಿಷ್ಠ ಅಂಕಗಳು : 200***

## ಸೂಚನೆಗಳು

1. ಪರೀಕ್ಷೆ ಪ್ರಾರಂಭಗೊಂಡ ತಕ್ಷಣವೇ ಒ.ಎಂ.ಆರ್. ಉತ್ತರಹಾಳೆಯಲ್ಲಿ ಪ್ರಶ್ನೆ ಪುಸ್ತಿಕೆ ಶ್ರೇಣಿಯನ್ನು ಗುರುತು ಮಾಡುವ ಮೊದಲು, ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಶ್ರೇಣಿಯ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪುಸ್ತಿಕೆಯ ಶ್ರೇಣಿ A, B, C ಅಥವಾ D ಅನ್ನು ವಿಷಯ ಸಂಕೇತ ಮತ್ತು ನೋಂದಣಿ ಸಂಖ್ಯೆಯನ್ನು OMR ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು. ಹಾಗೂ ನಿಗದಿತ ಸ್ಥಳದಲ್ಲಿ ತಾವು ಮತ್ತು ಸಂವೀಕ್ಷಕರು ಸಹಿ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಒ.ಎಂ.ಆರ್. ಹಾಳೆಯಲ್ಲಿ ತಿಳಿಸಿರುವ ಯಾವುದೇ ಮಾಹಿತಿಯನ್ನು ಭರ್ತಿ ಮಾಡುವುದು/ಎನ್ ಕೋಡ್ ಮಾಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಭರ್ತಿ ಮಾಡದಿದ್ದಲ್ಲಿ/ತಪ್ಪಿದಲ್ಲಿ ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.**
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ **ಬೇರೆ ಏನನ್ನೂ ಬರೆಯಬಾರದು.**

| **ನೋಂದಣಿ ಸಂಖ್ಯೆ** |
|---|
| |

4. ಈ ಪ್ರಶ್ನೆ ಪುಸ್ತಿಕೆ **100** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಅದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು**. ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.** ಪ್ರತಿ ತಪ್ಪು ಉತ್ತರಕ್ಕೆ ಪ್ರಶ್ನೆಗೆ ನಿಗದಿಪಡಿಸಿದ ಅಂಕಗಳ ¼ (0·25) ರಷ್ಟು ಅಂಕಗಳನ್ನು ಕಳೆಯಲಾಗುವುದು.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**


www.kpscvaani.com

1. ‘ಶಿಥಿಲದಿತ್ವ’ ಎಂದರೇನು ?

(1) ತೇಲಿಸಿ ಉಚ್ಚರಿಸುವುದು

(2) ಒತ್ತು ಕೊಟ್ಟು ಉಚ್ಚರಿಸುವುದು

(3) ಶೃತಿ ಕಪಟವಾಗಿ ಉಚ್ಚರಿಸುವುದು

(4) ದೀರ್ಘವಾಗಿ ಉಚ್ಚರಿಸುವುದು

2. ಕೆಳಗಿನ ಲೇಖಕರುಗಳನ್ನು ಮತ್ತು ಅವರ ಲೇಖನಗಳನ್ನು ಸರಿಹೊಂದಿಸಿ.

| ಲೇಖಕರು | ಲೇಖನ |
|---|---|
| (A) ಸ್ಪೂರ್ಟೆವಾಂಟ್ | (i) ಕರ್ನಾಟಕ ಭಾಷಾ ಭೂಷಣ |
| (B) ಎರಡನೇ ನಾಗವರ್ಮ | (ii) ಕನ್ನಡ ವ್ಯಾಕರಣ ಸೂತ್ರಗಳು |
| (C) ಕೇಶಿರಾಜ | (iii) ಭಾಷೆ ಎಂಬುದು ಯಾದೃಚ್ಛಿಕ ಧ್ವನಿ ಸಂಕೇತಗಳ ಒಂದು ವ್ಯವಸ್ಥೆ |
| (D) ಕಿಟೆಲ್ | (iv) ಕೆಲವು ನಿಜ ಬಿಂದುಗಳ, ಕೆಲವು ವಿಕಲ್ಪಾರ್ಥ ಬಿಂದುಗಳೆಂದು ಹೇಳಿದವರು. |

ಸರಿ ಉತ್ತರವನ್ನು ಆಯ್ಕೆ ಮಾಡಿ:

| | (A) | (B) | (C) | (D) |
|---|---|---|---|---|
| (1) | (iii) | (i) | (iv) | (ii) |
| (2) | (iv) | (iii) | (ii) | (i) |
| (3) | (ii) | (iv) | (i) | (iii) |
| (4) | (iii) | (ii) | (iv) | (i) |

3. ‘ಗಾಥಾಸಪ್ತಶತಿ’ ಎಂಬ ಪ್ರಾಕೃತ ಭಾಷೆಯಲ್ಲಿರುವ ಪದ್ಯಕಾವ್ಯವನ್ನು ಸಂಕಲಿಸಿರುವ ಹಾಲರಾಜನು ತನ್ನನ್ನು ಏನೆಂದು ಕರೆದುಕೊಂಡಿದ್ದಾನೆ?

(1) ಕುಂತಲ ಜನಪದೇಶ್ವರ

(2) ಕವಿತಾ ಗುಣಾರ್ಣವ

(3) ಕುರುಳ್ಗಳ ಸವಣ

(4) ಷಟ್ಪದಿ ಬ್ರಹ್ಮ

4. ಇವರಲ್ಲಿ ಒಬ್ಬ ಕವಿ ಕಾಲದ ದೃಷ್ಟಿಯಿಂದ ಬೇರೆಯಾದವನು. ಗುಂಪಿಗೆ ಸೇರದ ಆ ಕವಿ ಯಾರು?

(1) ಅಸಗ

(2) ಗುಣನಂದಿ

(3) ರುದ್ರಭಟ್ಟ

(4) ಗುಣವರ್ಮ

5. ಡಿ.ಆರ್. ನಾಗರಾಜ್ ಅವರ ವಿಮರ್ಶಾ ಕೃತಿ

(1) ಮುನ್ನೋಟ

(2) ಗತಿಶೀಲ

(3) ಸಂಸ್ಕೃತಿ ಮತ್ತು ಉಪಸಂಸ್ಕೃತಿ

(4) ಅಮೃತ ಮತ್ತು ಗರುಡ


www.kpscvaani.com

6. 'ಪೆತ್ತಜಯಾನ್, ಪೊರವಿಟ್ಟಾನ್, ಪೋದಾನ್' ಇವು ಯಾವ ಕನ್ನಡದ ರೂಪಗಳು: (506/11 – 1)
   (1) ಹಳೆಗನ್ನಡ
   (2) ಪೂರ್ವದ ಹಳೆಗನ್ನಡ
   (3) ಹೊಸಗನ್ನಡ
   (4) ನಡುಗನ್ನಡ

7. 'ರನ್ನನ ಗದಾಯುದ್ಧಕ್ಕೆ ಆಕರ ಗ್ರಂಥಗಳು ಯಾವುವು?
   (1) ಭಾಸನ ಊರುಭಂಗ, ಭಟ್ಟನಾರಾಯಣನ ವೇಣಿಸಂಹಾರ
   (2) ಭಾಸನ ಊರುಭಂಗ, ಶೂದ್ರಕನ ಮೃಚ್ಛಕಟಿಕ
   (3) ಭಟ್ಟನಾರಾಯಣನ ವೇಣಿಸಂಹಾರ, ಭವಭೂತಿಯ ಉತ್ತರ ರಾಮಚರಿತೆ
   (4) ಭಾಸನ ಊರು ಭಂಗ, ಭವಭೂತಿಯ ಉತ್ತರ ರಾಮಚರಿತೆ

8. ಹರಿಹರನ 'ಗಿರಿಜಾ ಕಲ್ಯಾಣ ಮಹಾಪ್ರಬಂಧಂ' ಕೃತಿ ಯಾವ ಛಂದಸ್ಸಿನಲ್ಲಿ ರಚನೆಯಾಗಿದೆ?
   (1) ಷಟ್ಪದಿ
   (2) ರಗಳೆ
   (3) ಚಂಪೂ
   (4) ಕಂದ ಪದ್ಯ

9. 'ರಾಮಚಂದ್ರ ಚರಿತ ಪುರಾಣ' ಅಥವ 'ಪಂಪ ರಾಮಾಯಣ'ದ ಲೇಖಕರು ಯಾರು?
   (1) ಪಂಪ
   (2) ರನ್ನ
   (3) ನಾಗಚಂದ್ರ
   (4) ಜನ್ನ

10. 'ದ್ಯುಮಣಿ ಅಲ್ಲಮ ಸಿಲುಕದಾದನು ತಮದ ಮಾಯೆಗೆ' ಎಂದು ಹೇಳಿದ ಕವಿ ಯಾರು?
   (1) ಆಂಡಯ್ಯ
   (2) ರಾಘವಾಂಕ
   (3) ಚಾಮರಸ
   (4) ರತ್ನಾಕರ ವರ್ಣಿ

11. ಹರಿಶ್ಚಂದ್ರನ ಕಥೆಗೆ ಸಾಹಿತ್ಯ ರೂಪಧಾರಣೆ ಮಾಡಿಸುವ ಮೊದಲ ಪ್ರಯತ್ನ ಸಂಸ್ಕೃತದ ಯಾವ ನಾಟಕದಲ್ಲಿ ನಡೆದಿದೆ?
   (1) ಚಂಡಕೌಶಿಕ ನಾಟಕ
   (2) ದೇವೀ ಭಾಗವತ ನಾಟಕ
   (3) ಸಾನಂದ ನಾಟಕ
   (4) ಶಾಕುಂತಲ ನಾಟಕ

12. ಕನ್ನಡ ಜನಪದ ಸಾಹಿತ್ಯದ ಪಿ.ಎಚ್.ಡಿ. ಅಧ್ಯಯನದ ಮೊದಲ ಕೃತಿ:
   (1) ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು
   (2) ಮಧುರಚೆನ್ನ ಜೀವನ ಹಾಗೂ ಕೃತಿಗಳ ಸಮೀಕ್ಷೆ
   (3) ಕಲಬುರಗಿ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು
   (4) ಕನ್ನಡ ಜಾನಪದ ಗೀತೆಗಳು


www.kpscvaani.com

13. (ಎ) ಒಳವು ಮಹಾಪ್ರಾಣಂಗಳ್
(ಬಿ) ನಾಲ್ವತ್ತೇಳಾಯ್ತುಳೆ ಸುದ್ಧಗೆ ಅಚ್ಚಗನ್ನಡಕ್ಕೀಕ್ರಮದಿಂ
(ಸಿ) ಲಿಂಗಮೊಂಬತ್ತು ತೆರಂ
(ಡಿ) ದ್ವಿವಚನ ಮುಚಿತದೆ ಬರ್ಕುಂ –

ಈ ಮಾತುಗಳನ್ನು ಹೇಳಿದ ವೈಯಾಕರಣಿ ಯಾರು?

(1) ಭಟ್ಟಾಕಳಂಕ
(2) ಎರಡನೆ ನಾಗವರ್ಮ
(3) ಕೇಶಿರಾಜ
(4) ಶ್ರೀವಿಜಯ

14. "ಹಸಿರು ಬಳ್ಳಿಯಲ್ಲಿ ಬಿಳಿಯ ಹೂವೊಂದು ಅರಳಿದ್ದನ್ನು ನಾನು ಕಂಡೆ" ಎನ್ನುವುದು ಕನ್ನಡದ ಒಂದು ವಾಕ್ಯ. ಎಂತಹ ಅವಿದ್ಯಾವಂತನಾದರೂ ಇದನ್ನು "ಬಿಳಿಯ ಕಂಡೆ ಹಸಿರು ನಾನು ಅರಳಿದ್ದನ್ನು ಹೂವೊಂದು ಬಳ್ಳಿ" ಎಂದು ಹೇಳುವುದಿಲ್ಲ. ಒಂದು ಭಾಷೆಯನ್ನಾಡುವ ಜನ ಸಹಜವಾಗಿ ಸರಿಯಾದ ವಾಕ್ಯರಚನೆಗಳನ್ನೇ ಮಾಡುತ್ತಾರೆ. ಇದಕ್ಕೆ ಅವರ ________ ಕಾರಣವೆಂದು ಆಧುನಿಕ ಭಾಷಾತಜ್ಞರು ಅಭಿಪ್ರಾಯಪಡುತ್ತಾರೆ.

(1) ದೇವರ ಕೃಪೆ
(2) ಕಲಿಕೆಯ ಶಕ್ತಿ
(3) ಸುಪ್ತ ವ್ಯಾಕರಣ
(4) ರಕ್ತದಲ್ಲಿ ಹರಿಯುವ ಭಾಷಾಭಿಮಾನ

15. ಅಪ್ಪೈ, ಇಂತೆಂಬಾ, ಎಯ್ದಿದೆ ಮುಂತಾದ ವಿಧ್ಯರ್ಥಕ ಮಧ್ಯಮ ಪುರುಷ ರೂಪ ಪ್ರಯೋಗಗಳಿರುವ ಕೃತಿ:

(1) ಚಾವುಂಡರಾಯ ಪುರಾಣ
(2) ವಡ್ಡಾರಾಧನೆ
(3) ಮುದ್ರಾಮಂಜೂಷ
(4) ಶ್ರೀರಾಮಶ್ವಮೇಧ

16. 'ಯತಿ ಎಂಬುದು ಉಸಿರ್ವ ತಾಣ' ಎಂದು ಹೇಳಿದವರು ಯಾರು?

(1) ಕೇಶಿರಾಜ
(2) ಶ್ರೀವಿಜಯ
(3) ನಾಗವರ್ಮ
(4) ಆನಂದವರ್ಧನ

17. 'ನಾಭಿ ಮೂಲದಿಂ ಕಹಳೆಯ ಪಾಂಗಿನವೋಲ್ ಜನಿಯಿಸುಗುಂ ಶಬ್ದದ್ರವ್ಯಂ' ಎಂದು ಹೇಳಿದ ವೈಯ್ಯಾಕರಣಿ ಯಾರು?

(1) 1ನೇ ನಾಗವರ್ಮ
(2) ಭಟ್ಟಾಕಳಂಕ
(3) ದುರ್ಗಸಿಂಹ
(4) ಕೇಶಿರಾಜ

18. ಕೇಶಿರಾಜ ಹೇಳುವ 'ಲಿಂಗಮೊಂಬತ್ತುತೆರಂ' ಯಾವ ಭಾಷೆಯಲ್ಲಿದೆ?

(1) ಸಂಸ್ಕೃತ
(2) ಕನ್ನಡ
(3) ತಮಿಳು
(4) ಮಲೆಯಾಳಿ

19. ಕೊಡವ ಜಾನಪದವನ್ನು ಪರಿಚಯಿಸುವ ಗ್ರಂಥ ?

(1) ಜಾನಪದ ಸರಸ್ವತಿ
(2) ದಕ್ಷಿಣ ಕನ್ನಡ ಜನಪದ ಸಾಹಿತ್ಯ
(3) ಕರ್ನಾಟಕದ ಜಾನಪದ ಕಲೆಗಳು
(4) ಪಟ್ಟೋಲೆ ಪಳಮೆ

20. ವಿಮಲಸೂರಿಯ ರಾಮಾಯಣ ಕಥಾಸಂಪ್ರದಾಯಕ್ಕೆ ಸೇರಿದ ಸಂಗೀತ ಪ್ರಭಾವಿತ ಕೃತಿ:

(1) ನಾಗಚಂದ್ರನ ರಾಮಚಂದ್ರ ಚರಿತೆ ಪುರಾಣ
(2) ಕುಮುದೇಂದು ರಾಮಾಯಣ
(3) ತೊರವೆ ರಾಮಾಯಣ
(4) ಮುದ್ದಣನ ರಾಮಾಯಣ


www.kpscvaani.com

21. ರಾಜಶೇಖರನು ಹೇಳುವಂತೆ ಸಹೃದಯನಿಗೆ ಇರಬೇಕಾದ ಪ್ರತಿಭೆ:
   (1) ಭಾವಯತ್ರೀ ಪ್ರತಿಭೆ
   (2) ಕಾರಯತ್ರೀ ಪ್ರತಿಭೆ
   (3) ವರ್ಣನ ಪ್ರತಿಭೆ
   (4) ವಿಮರ್ಶನ ಪ್ರತಿಭೆ

22. ಶಬ್ದಕ್ಕಿರುವ ಮೂರನೆಯ ಅರ್ಥವನ್ನು ಆನಂದ ವರ್ಧನ ಏನೆಂದು ಕರೆಯುತ್ತಾನೆ?
   (1) ವಾಚ್ಯಾರ್ಥ
   (2) ಗೇಯಾರ್ಥ
   (3) ಪ್ರತೀಯಮಾನಾರ್ಥ
   (4) ಲಕ್ಷ್ಯಾರ್ಥ

23. 'ಕಾವ್ಯಮೀಮಾಂಸೆ' ಎಂಬ ಮಾತನ್ನು ಜನಪ್ರಿಯಗೊಳಿಸಿದುದಲ್ಲದೆ ತನ್ನ ಕೃತಿಗೆ 'ಕಾವ್ಯಮೀಮಾಂಸೆ' ಎಂಬ ಹೆಸರನ್ನಿತ್ತ ಕೀರ್ತಿಗೆ ಪಾತ್ರನಾದವನು:
   (1) ವಾಮನ
   (2) ರಾಜಶೇಖರ
   (3) ಕುಂತಕ
   (4) ವಿಶ್ವನಾಥ

24. ಪೈಶಾಚೀ ಭಾಷೆಯಲ್ಲಿದ್ದ ಗುಣಾಢ್ಯನ 'ಬೃಹತ್ಕಥೆ' ಯನ್ನು ಸಂಸ್ಕೃತಕ್ಕೆ ಅನುವಾದಿಸಿದವನು:
   (1) ಅಮೋಘವರ್ಷ ನೃಪತುಂಗ
   (2) ವಿಕ್ರಮಾದಿತ್ಯನ ಮಗ ಸೋಮೇಶ್ವರ
   (3) ಗಂಗರ ದುರ್ವಿನೀತ
   (4) ಚಾವುಂಡರಾಯ

25. ಮ್ಯಾಕ್ಸ್‌ಮುಲ್ಲರ್ ಮಂಡಿಸಿದ 'ಅನುರಣನವಾದ'ವನ್ನು ಇತರ ವಿದ್ವಾಂಸರು ಈ ರೀತಿ ಕರೆದರು:
   (1) ಪೂಹ್ ಪೂಹ್‌ವಾದ
   (2) ಬೌಬೌವಾದ
   (3) ಡಿಂಗ್‌ಡಾಂಗ್‌ವಾದ
   (4) ಯೊ–ಹೆ–ವಾದ

26. ಜೈನ ಸಂಪ್ರದಾಯದ ಪ್ರಕಾರ ಆದಿವೃಷಭ ತೀರ್ಥಂಕರನು ತನ್ನ ಮಗಳಾದ ಬ್ರಹ್ಮಿಗೆ ಬಲಗೈಯಲ್ಲಿ ಲಿಪಿಯನ್ನು ಬೋಧಿಸಿದರೆ, ಇನ್ನೊಬ್ಬ ಮಗಳಾದ ಸೌಂದರಿಗೆ ಎಡಗೈಯಲ್ಲಿ ಬೋಧಿಸಿದ್ದು________
   (1) ವಿಜ್ಞಾನ
   (2) ವ್ಯಾಕರಣ
   (3) ಗಣಿತ
   (4) ಸಂಗೀತ

27. "ಕಸವರಮಂ ಕಳೆದು ಕಸವನಾಂತಮೋಲಕ್ಕುಂ" ಈ ಹೇಳಿಕೆಯನ್ನು ತನ್ನ ಕಾವ್ಯದ ಧೋರಣೆಯನ್ನಾಗಿ ಮಾಡಿಕೊಂಡ ಕವಿ:
   (1) ಹರಿಹರ
   (2) ರಾಘವಾಂಕ
   (3) ಷಡಕ್ಷರಿ
   (4) ಪಂಪ

28. ಧ್ವನಿಯೇ ಇಲ್ಲದೆ, ವಾಚ್ಯಾರ್ಥ ಪ್ರಧಾನವಾದ ಕಾವ್ಯತಂತ್ರಗಳಿಗೇ ಪ್ರಾಮುಖ್ಯ ನೀಡುವ ರಚನೆಯನ್ನು ಈ ರೀತಿ ಕರೆಯುತ್ತಾರೆ:
   (1) ಮಧ್ಯಮ ಕಾವ್ಯ
   (2) ಚಿತ್ರಕಾವ್ಯ
   (3) ಶ್ರೇಷ್ಠ ಕಾವ್ಯ
   (4) ತಂತ್ರಕಾವ್ಯ

29. "ರಮಣೀಯಾರ್ಥ ಪ್ರತಿಪಾದಕಃ ಶಬ್ದಃ ಕಾವ್ಯಂ" ಕಾವ್ಯವನ್ನು ಕುರಿತು ಈ ಲಕ್ಷಣವನ್ನು ಹೇಳಿದ ಅಲಂಕಾರಿಕ:
   (1) ವಿಶ್ವನಾಥ
   (2) ಮಮ್ಮಟ
   (3) ಜಗನ್ನಾಥ ಪಂಡಿತ
   (4) ದಂಡಿ


www.kpscvaani.com

30. ದೊರೆತಿರುವ ಸಂಸ್ಕೃತ ಲಕ್ಷಣ ಗ್ರಂಥಗಳಲ್ಲಿ ಶಾಂತರಸದ ಪ್ರಸ್ತಾವನೆ ಮೊದಲಿಗೆ ಬಂದಿರುವುದು:

(1) ಉದ್ಭಟನ ಕಾವ್ಯಾಲಂಕಾರ ಸಾರ ಸಂಗ್ರಹದಲ್ಲಿ

(2) ಭರತನ ನಾಟ್ಯಶಾಸ್ತ್ರದಲ್ಲಿ

(3) ದಂಡಿಯ ಕಾವ್ಯಾದರ್ಶದಲ್ಲಿ

(4) ಅಮರಕೋಶದಲ್ಲಿ

31. ಈ ಕೆಳಗೆ ಕೊಟ್ಟಿರುವ ಹೇಳಿಕೆ ಮತ್ತು ಅರ್ಥದಲ್ಲಿ ಸರಿ ಉತ್ತರವನ್ನು ಆಯ್ಕೆ ಮಾಡಿ.

ಹೇಳಿಕೆ: "ಮುನ್ನಿನ ಕಬ್ಬಗಳನ್ನೆಲ್ಲಮಂ ಇಕ್ಕಿ ಮೆಟ್ಟಿದವು"

ಅರ್ಥ: ಮುಂದಿನ ಕಾವ್ಯಗಳಿಗೆ ಬಟ್ಟೆದೋರಿದವು

(1) ಹೇಳಿಕೆ ಸರಿ ಅರ್ಥ ಸರಿ

(2) ಹೇಳಿಕೆ ಸರಿ ಅರ್ಥ ತಪ್ಪು

(3) ಹೇಳಿಕೆ ತಪ್ಪು ಅರ್ಥ ಸರಿ

(4) ಹೇಳಿಕೆ ತಪ್ಪು ಅರ್ಥ ತಪ್ಪು

32. ಅರಿಸ್ಟಾಟಲ್ ಕಾವ್ಯಮೀಮಾಂಸೆಯನ್ನು ಹೊರೇಸನ ಸಾಹಿತ್ಯ ವಿಮರ್ಶೆಯನ್ನು ಕನ್ನಡಕ್ಕೆ ತಂದು ಉಪಕರಿಸಿದವರು:

(1) ಟಿ.ಎಸ್. ವೆಂಕಣ್ಣಯ್ಯ

(2) ಜಿ.ಎಸ್. ಅಮೂರ

(3) ಎಚ್.ಎಸ್. ರಾಘವೇಂದ್ರರಾವ್

(4) ಎನ್. ಬಾಲಸುಬ್ರಮಣ್ಯ

33. ಇಲ್ಲಿನ ಪಟ್ಟಿ – 1 ಮತ್ತು ಪಟ್ಟಿ – 2 ನ್ನುಹೊಂದಿಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| <u>ಪಟ್ಟಿ – 1</u> | <u>ಪಟ್ಟಿ – 2</u> |
|---|---|
| (A) ಭಾಮಹ | (i) ರಮಣೀಯಾರ್ಥ ಪ್ರತಿಪಾದ ಶಬ್ದಕಾವ್ಯ |
| (B) ದಂಡಿ | (ii) ಶಬ್ದಾರ್ಥ ಸಹಿತ ಕಾವ್ಯಂ |
| (C) ವಾಮನ | (iii) ಪ್ರಾಣಾ ದಶಗಣಾವೃತಂ |
| (D) ಜಗನ್ನಾಥ | (iv) ರೀತಿರಾತ್ಮಕಾವ್ಯಸ್ಯಂ |

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

| | (A) | (B) | (C) | (D) |
|---|---|---|---|---|
| (1) | (ii) | (iii) | (iv) | (i) |
| (2) | (iii) | (ii) | (i) | (iv) |
| (3) | (iv) | (i) | (ii) | (iii) |
| (4) | (i) | (iv) | (iii) | (ii) |

34. "ವ್ಯವಹಾರಕ್ಕಾಗಿ ಸಂಕೇತಗಳಿಂದ ಒಡಗೂಡಿದ ಶಬ್ದ ಸಮುದಾಯವೇ ಭಾಷೆ" ಈ ಹೇಳಿಕೆಯನ್ನು ವ್ಯಾಖ್ಯಾನಿಸಿದವರು:

(1) ಎಡ್ವರ್ಡ್ ಸಪೀರ್

(2) ಸಿ.ಎಲ್. ಬಾರ್ಬರ್

(3) ದಂಡಿ

(4) ಭಟ್ಟಾಕಳಂಕ

35. ಈ ಕೆಳಗಿನವುಗಳಲ್ಲಿ ಯಾವ ವಿಭಾಗ ಸರಿಯಾಗಿದೆ ?

(1) ಪಂಪ ಪೂರ್ವಯುಗ, ಪಂಪಯುಗ, ಹರಿಹರಯುಗ, ಕುಮಾರವ್ಯಾಸಯುಗ

(2) ಪೂರ್ವದ ಹಳಗನ್ನಡ, ಹಳಗನ್ನಡ, ಮಧ್ಯಕನ್ನಡ, ಹೊಸಗನ್ನಡ ಕಾಲ

(3) ಆರಂಭಕಾಲ, ಮತಪ್ರಾಬಲ್ಯಕಾಲ, ನವೀನಕಾಲ

(4) ಈ ಮೇಲಿನವುಗಳೆಲ್ಲಾ ಸರಿಯಾಗಿದೆ.


www.kpscvaani.com

36. "ಮಾನಸಿಕ ದೂರ" ಪರಿಭಾಷೆಯ ಪ್ರತಿಪಾದಕರು:

(1) ಹೋರೇಸ್

(2) ಕೋಲ್ರಿಜ್

(3) ಎಡ್ವರ್ಡ್ ಬುಲ್ಲೋ

(4) ಹೋಮರ್

37. "ಚಾರಿತ್ರಿಕ ವಿಮರ್ಶೆ"ಯ ಪಂಥದವರು ಯಾರು?

(1) ಸಿ.ಡಿ.ಲೂಯಿಸ್ ಮತ್ತು ಸ್ಪೆಂಡರ್

(2) ಐ.ಎ.ರಿಚರ್ಡ್ ಮತ್ತು ಹ್ಯೂಮ್

(3) ಆರ್.ಎಸ್. ಕ್ರೇನ್ ಮತ್ತು ರಾಲ್ಫ್‌ಕೊಹನ್

(4) ಬ್ಲಾಕ್‌ಮಾರ್ ಮತ್ತು ಕ್ಲಿನಿತ್ ಬ್ರೂಕ್

38. ಸಪ್ತಮಿ ವಿಭಕ್ತಿಯ ಪ್ರತ್ಯಯ 'ಉಳ್' ಎಂದು ಬಳಕೆಗೊಳ್ಳುವ ಕನ್ನಡ ಭಾಷೆಯ ಕಾಲಘಟ್ಟ:

(1) ಹೊಸಗನ್ನಡ

(2) ಹಳೆಗನ್ನಡ

(3) ನಡುಗನ್ನಡ

(4) ಪೂರ್ವದ ಹಳೆಗನ್ನಡ

39. ಈ ಕೆಳಗಿನವುಗಳಲ್ಲಿ ಜನ್ನನ ಚಿತ್ರಣದ ದಿಟ್ಟ ಹೆಣ್ಣಾದ ಅಮೃತಮತಿಯದಲ್ಲದ ಮಾತು ಯಾವುವು?

(1) 'ಒಲವಾದೊಡೆ ರೂಪಿನ ಕೋಟಲೆಯೇವುದೊ'

(2) 'ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್'

(3) 'ಕಾರ್ಯಮಾಗೆ ಕಾರಣದಿಂ ಫಲಮೇನ್'

(4) 'ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ'

40. ಈ ಕೆಳಕಂಡ ಅಲಂಕಾರಿಕರನ್ನೂ, ಅವರ ಕೃತಿಗಳನ್ನೂ ಹೊಂದಿಸಿರಿ. ಇವುಗಳಲ್ಲಿ ಯಾವ ಗುಂಪು ಸರಿಯಾಗಿದೆ ಎಂದು ಗುರ್ತಿಸಿ.

<u>ಎ–ಗುಂಪು</u>

(1) ಭಾಮಹ — ಕಾವ್ಯಾನುಶಾಸನ
(2) ದಂಡಿ — ಕಾವ್ಯಪ್ರಕಾಶ
(3) ಮಮ್ಮಟ — ಕಾವ್ಯಾದರ್ಶ
(4) ಹೇಮಚಂದ್ರ — ಕಾವ್ಯಾಲಂಕಾರ

<u>ಬಿ–ಗುಂಪು</u>

(1) ಭಾಮಹ — ಕಾವ್ಯಾದರ್ಶ
(2) ದಂಡಿ — ಕಾವ್ಯಪ್ರಕಾಶ
(3) ಮಮ್ಮಟ — ಕಾವ್ಯಾನುಶಾಸನ
(4) ಹೇಮಚಂದ್ರ — ಕಾವ್ಯಾಲಂಕಾರ

<u>ಸಿ–ಗುಂಪು</u>

(1) ಭಾಮಹ — ಕಾವ್ಯಾಲಂಕಾರ
(2) ದಂಡಿ — ಕಾವ್ಯಾದರ್ಶ
(3) ಮಮ್ಮಟ — ಕಾವ್ಯಪ್ರಕಾಶ
(4) ಹೇಮಚಂದ್ರ — ಕಾವ್ಯಾನುಶಾಸನ

<u>ಡಿ–ಗುಂಪು</u>

(1) ಭಾಮಹ — ಕಾವ್ಯಪ್ರಕಾಶ
(2) ದಂಡಿ — ಕಾವ್ಯಾದರ್ಶ
(3) ಮಮ್ಮಟ — ಕಾವ್ಯಾನುಶಾಸನ
(4) ಹೇಮಚಂದ್ರ — ಕಾವ್ಯಾಲಂಕಾರ

<u>ಸರಿಯಾದ ಉತ್ತರವನ್ನು ಆರಿಸಿರಿ:</u>

(1) ಎ–ಗುಂಪು

(2) ಬಿ–ಗುಂಪು

(3) ಸಿ–ಗುಂಪು

(4) ಡಿ–ಗುಂಪು

41. ರತಿ, ಶೋಕ, ಉತ್ಸಾಹ, ಜುಗುಪ್ಸೆ ಮೊದಲಾದವು:

(1) ಸ್ಥಾಯೀ ಭಾವಗಳು

(2) ಸಂಚಾರಿ ಭಾವಗಳು

(3) ರಸಗಳು

(4) ಈ ಮೇಲಿನ ಯಾವುದೂ ಅಲ್ಲ.


www.kpscvaani.com

42. ಕವಿಪ್ರತಿಭೆ ಸೃಷ್ಟಿಕಾರ್ಯವನ್ನು ನಿರ್ವಹಿಸಿದರೆ, ಅದರ ಅನುಸೃಷ್ಟಿಯ ಕಾರ್ಯ ನಡೆಯಲು ಬೇಕಾದದ್ದು:
   (1) ದೈವಕೃಪೆ
   (2) ರಾಜಾಶ್ರಯ
   (3) ಸಹೃದಯ ಪ್ರತಿಭೆ
   (4) ಗ್ರಂಥಾಲಯ

43. ಚಕೋರ ಪಕ್ಷಿಗಳು ಬೆಳದಿಂಗಳನ್ನು ಕುಡಿಯುತ್ತವೆ, ಚಂದ್ರಕಾಂತ ಶಿಲೆ ಬೆಳದಿಂಗಳಿನಲ್ಲಿ ಕರಗುತ್ತದೆ ಮುಂತಾಗಿ ಹೇಳುವುದು ಕಾವ್ಯಮೀಮಾಂಸೆಯಲ್ಲಿ ________ ಎಂದು ಕರೆಸಿಕೊಳ್ಳುತ್ತವೆ.
   (1) ಕವಿಸಮಯ
   (2) ರಸಜ್ಞತೆ
   (3) ಸುಕೋಮಲ ಕಲ್ಪನೆ
   (4) ಪ್ರತಿಭಾ ವಿಲಾಸ

44. ಮಿಲೀತಾ, ಉಲ್ಲೇಖ, ಅನುಗುಣ, ಕಾವ್ಯಲಿಂಗ – ಇವೆಲ್ಲ ಯಾವುದರ ಹೆಸರುಗಳು?
   (1) ವಿವಿದ ಛಂದೋ ಪ್ರಕಾರಗಳು
   (2) ಅಲಂಕಾರಗಳ ಹೆಸರುಗಳು
   (3) ಕಾವ್ಯಮೀಮಾಂಸೆಯ ಕೃತಿಗಳ ಹೆಸರುಗಳು
   (4) ಈ ಮೇಲಿನ ಯಾವುವೂ ಅಲ್ಲ

45. ಭಾಷೆಯನ್ನು ಕುರಿತ ಸಮರ್ಪಕವಾದ ವ್ಯಾಖ್ಯೆ ನೀಡಿದ ಭಾಷಾವಿಜ್ಞಾನಿ:
   (1) ಬ್ಲಾಕ್ ಅಂಡ್ ಟ್ರೇಗರ್
   (2) ಸ್ಟುರ್ಟೆವಾಂಟ್
   (3) ಹಾಕೆಟ್
   (4) ಪ್ಲೇಟೋ

46. ಭಾಷೆಯ ಉಗಮದ ವಾದಗಳಲ್ಲೊಂದಾದ ಅನುಕರಣವಾದದ ಪ್ರತಿಪಾದಕ:
   (1) ಡಾರ್ವಿನ್
   (2) ಲೀಬ್ನಿಜ್
   (3) ಮ್ಯಾಕ್ಸ್‌ಮುಲ್ಲರ್
   (4) ನೋರಿ

47. ಯಶೋಧರ ಚರಿತೆ ಲೌಕಿಕ ಕಥೆಯಾದರೂ ಅದು ________ ಸಾರುವ ಧರ್ಮಗ್ರಂಥ.
   (1) ಅಹಿಂಸಾ ಹಿರಿಮೆ
   (2) ಹಿಂಸಾ ಹಿರಿಮೆ
   (3) ಕರುಣೆ
   (4) ಪ್ರೀತಿ

48. ಡಾ. ವಿಜಯ ದಬ್ಬೆಯವರ ________ ಕೃತಿಯು ಡಾ. ಅನುಪಮಾ ಪ್ರಶಸ್ತಿ ಪಡೆದುಕೊಂಡಿದೆ.
   (1) ನಾರಿ – ನೆಲೆ – ದಿಗಂತ
   (2) ಮಹಿಳೆ ಸಾಹಿತ್ಯ ಸಮಾಜ
   (3) ಶ್ಯಾಮಲ ಸಂಚಯ
   (4) ಹಿತೈಷಿಣಿಯ ಹೆಜ್ಜೆಗಳು

49. ಎ.ಎನ್. ಮೂರ್ತಿರಾವ್‌ರವರ ________ ಕೃತಿಗೆ ಪಂಪ ಪ್ರಶಸ್ತಿ ದೊರೆತಿದೆ.
   (1) ಚಿತ್ರಗಳು ಮತ್ತು ಪತ್ರಗಳು
   (2) ಅಪರ ವಯಸ್ಕನ ಅಮೇರಿಕಾ ಯಾತ್ರೆ
   (3) ಚಂಡಮಾರುತ
   (4) ದೇವರು

50. ಉದ್ದಂಡ ಷಟ್ಪದಿಯನ್ನು ಪರಿಚಯಿಸಿದ ಕವಿ ________
   (1) ಹರಿಹರ
   (2) ರಾಘವಾಂಕ
   (3) ಪೊನ್ನ
   (4) ಜಯಸಿಂಹ

51. 'ಸಿಂಹಾವಲೋಕನ' ಕ್ರಮವನ್ನು ಈ ಕೆಳಗಿನ ಯಾವ ಕಾವ್ಯದಲ್ಲಿ ಕಾಣಬಹುದು?
   (1) ವಿಕ್ರಮಾರ್ಜುನ ವಿಜಯ
   (2) ಸಾಹಸಭೀಮ ವಿಜಯ
   (3) ಕುಮಾರವ್ಯಾಸ ಭಾರತ
   (4) ಗಿರಿಜಾ ಕಲ್ಯಾಣ


www.kpscvaani.com

52. 'ಅದ್ಭುತ' ರಸದ ಸ್ಥಾಯಿಭಾವ ________

(1) ಜಿಗುಪ್ಸೆ

(2) ಭಯ

(3) ವಿಸ್ಮಯ

(4) ಕ್ರೋಧ

53. 'ಚರಿತ್ರೆಗಿಂತ ಕಾವ್ಯ ಹೆಚ್ಚು ತತ್ವಮೂಲವಾದುದ್ದು ಮತ್ತು ಹಿರಿದಾದುದು'
ಈ ಹೇಳಿಕೆಯ ರೂವಾರಿ ________

(1) ಅರಿಸ್ಟಾಟಲ್

(2) ಕೆಥಾರ್ನಿಕ್

(3) ಐಸೋಕ್ರೇಟ್ಸ್

(4) ಡಾಂಟೆ

54. ಆದರ್ಶ ರಾಜ್ಯದಿಂದ ಕವಿಯನ್ನು ಹೊರದೂಡಬೇಕು ಎಂದು ಹೇಳಿದ ಚಿಂತಕ ________

(1) ಪಿಂಡಾರ್

(2) ಪ್ಲೇಟೋ

(3) ಸೈಮೋನಿಡೀಸ್

(4) ಬುಲ್ಲೋ

55. ."ದಾರ್ಶನಿಕರು ಅನೇಕ ರೀತಿಯಲ್ಲಿ ಈ ಜಗತ್ತನ್ನು ಕೇವಲ ಅರ್ಥೈಸಿದ್ದಾರೆ ಅಷ್ಟೆ. ನಮಗೀಗ ಬೇಕಾಗಿರುವುದು ಜಗತ್ತನ್ನು ಪರಿವರ್ತಿಸುವುದು" ಈ ಹೇಳಿಕೆಯ ಚಿಂತಕ:

(1) ಕಾರ್ಲ್‌ಮಾರ್ಕ್ಸ್

(2) ಅರಿಸ್ಟಾಟಲ್

(3) ಡಾಂಟೆ

(4) ಟೇನ್

56. 'ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗಳ್ತೆ ಲಾಭಮೆಂಬಿವೆ ವಲಂ' ಎಂದು ಉದ್ಗರಿಸಿದ ಕವಿ:

(1) ರನ್ನ

(2) ಪೊನ್ನ

(3) ಪಂಪ

(4) ಕುಮಾರವ್ಯಾಸ

57. 'ವಡ್ಡಾರಾಧನೆ'ಯ 'ಭದ್ರಬಾಹು ಭಟ್ಟಾರರ ಕಥೆ'ಯ ನಂದಿಮಿತ್ರನ ತಂದೆ ತಾಯಿಗಳು.

(1) ದೇವಿಲ–ಪೃಥ್ವಿಶ್ರೀ

(2) ಕಾಷ್ಠಕೂಟ–ಜಯಘಂಟೆ

(3) ಕಾಷ್ಠಕೂಟ–ಪೃಥ್ವಿಶ್ರೀ

(4) ದೇವಿಲ–ಜಯಘಂಟೆ

58. '________ಇದುವೆ ಮಹಾಭಾರತಕ್ಕಾದಿಯಾಯ್ತುಬ್ಜದಳಾಕ್ಷೀ ಪೇಳ ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶಪ್ರಪಂಚಂ'|| ಈ ಮಾತನ್ನು 'ಪಂಪಭಾರತ'ದಲ್ಲಿ ಹೇಳಿದವನು.

(1) ದುರ್ಯೋಧನ

(2) ಭೀಮ

(3) ನಕುಲ

(4) ಸಹದೇವ

59. 'ಸೌಗಂಧಿಕಾ ಪರಿಣಯ' ಕೃತಿಯನ್ನು ಬರೆದವರು.

(1) ಕೆಂಪುನಾರಾಯಣ

(2) ಗಳಗನಾಥ

(3) ಮುಮ್ಮಡಿ ಕೃಷ್ಣರಾಜ

(4) ಬೋಳಾರ ಬಾಬುರಾಯ


www.kpscvaani.com

60. Tradition and Individual Talent ಲೇಖನ ಬರೆದವನು.

(1) ಕ್ರೋಚೆ
(2) ಟಿ.ಎಸ್. ಎಲಿಯಟ್
(3) ಐ.ಎ. ರಿಚರ್ಡ್
(4) ಶೆಲ್ಲಿ

61. ಭರತನ 'ನಾಟ್ಯಶಾಸ್ತ್ರ'ಕ್ಕೆ ವ್ಯಾಖ್ಯಾನ ಬರೆದವನು.

(1) ಉದ್ಭಟ
(2) ಭಟ್ಟಲೊಲ್ಲಟ
(3) ಆನಂದವರ್ಧನ
(4) ಕುಂತಕ

62. ಈ ಕಾವ್ಯಮೀಮಾಂಸಕರು ಕಾಶ್ಮೀರದವರಲ್ಲ.

(1) ಉದ್ಭಟ–ವಾಮನ
(2) ಕುಂತಕ–ವಾಮನ
(3) ಕ್ಷೇಮೇಂದ್ರ–ರುಯ್ಯಕ
(4) ದಂಡಿ–ರಾಜಶೇಖರ

63. ಭಟ್ಟನಾಯಕನ 'ಭುಕ್ತಿವಾದ'ವನ್ನು ಖಂಡಿಸಿ 'ಅಭಿವ್ಯಕ್ತಿವಾದ'ವನ್ನು ಬರೆದವನು.

(1) ಆನಂದವರ್ಧನ
(2) ರಾಜಶೇಖರ
(3) ಅಭಿನವಗುಪ್ತ
(4) ಕುಂತಕ

64. ಕವಿತೆಗೆ ಕಾರಣವಾದ ಎರಡು ಶಕ್ತಿಗಳು: 'Native Genius' (a) ಮತ್ತು 'Acquired Art' ಎಂದು ಕರೆದವನು.

(1) ಲಾಂಜಿನಸ್
(2) ಎಡ್ವರ್ಡ್ ಬುಲ್ಲೋ
(3) ಹೊರೇಸ್
(4) ಅರಿಸ್ಟಾಟಲ್

65. ಇಬ್ಸನನ 'ದಿ ಡಾಲ್ಸ್ ಹೌಸ್'ನ್ನು 'ಸೂತ್ರದ ಗೊಂಬೆ' ಎಂದು ಅನುವಾದಿಸಿದವರು.

(1) ಎಸ್. ವಿ. ರಂಗಣ್ಣ
(2) ಎಸ್. ಜಿ. ಶಾಸ್ತ್ರಿ
(3) ಬಿ.ಎಂ. ಶ್ರೀಕಂಠಯ್ಯ
(4) ಟಿ.ಪಿ. ಕೈಲಾಸಂ

66. ಸರ್ವಜ್ಞನ ವಚನಗಳನ್ನು ಮೊದಲು ಸಂಪಾದನೆ ಮಾಡಿದವರು.

(1) ಡಾ.ಎಲ್. ಬಸವರಾಜು
(2) ಇ.ಪಿ. ರೈಸ್
(3) ಉತ್ತಂಗಿ ಚೆನ್ನಪ್ಪ
(4) ಕೋ. ಚೆನ್ನಬಸಪ್ಪ

67. 'ಸಂಭಾವನೆ' ಇದು ಇವರಿಗೆ ಅರ್ಪಿಸಿದ ಸಂಭಾವನಾ ಗ್ರಂಥ.

(1) ಕು.ಶಿ. ಹರಿದಾಸ ಭಟ್ಟ
(2) ಬಿ.ಎಂ.ಶ್ರೀಕಂಠಯ್ಯ
(3) ತೀ.ನಂ.ಶ್ರೀಕಂಠಯ್ಯ
(4) ಹಾ.ಮಾ. ನಾಯಕ

68. ಶಿವರಾಮ ಕಾರಂತರ 'ಬಾಳ್ವೆಯೆ ಬೆಳಕು' ಕೃತಿ ಈ ಪ್ರಕಾರಕ್ಕೆ ಸೇರಿದೆ.

(1) ಸಾಹಿತ್ಯ ವಿಮರ್ಶೆ
(2) ಜೀವನ ಚರಿತ್ರೆ
(3) ವಿಚಾರ ಸಾಹಿತ್ಯ
(4) ಕಲಾ ಮೀಮಾಂಸೆ

69. '0–0=0' ಹೆಸರಿನ ಸಣ್ಣ ಕಥೆಯನ್ನು ಬರೆದವರು.

(1) ಕೊಡಗಿನ ಗೌರಮ್ಮ
(2) ಬಸವರಾಜ ಕಟ್ಟೀಮನಿ
(3) ಚೆನ್ನಣ್ಣ ವಾಲೀಕಾರ
(4) ತ.ರಾ.ಸು.

70. 'ಪಾದಳ್ಳಿ'ಯ ಮೂಲಕ ತೆರೆದುಕೊಳ್ಳುವ ಕಾದಂಬರಿ.

(1) 'ಗ್ರಾಮಾಯಣ'
(2) 'ಬಿರುಕು'
(3) 'ಚಿರಸ್ಮರಣೆ'
(4) 'ದಾಟು'


www.kpscvaani.com

71. ಕುವೆಂಪು ಅವರ 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ' ಲೇಖನವು ಅವರ ಈ ಸಂಕಲನದಲ್ಲಿದೆ.

(1) ವಿಚಾರ ಕ್ರಾಂತಿಗೆ ಆಹ್ವಾನ

(2) ಮನುಜಮತ ವಿಶ್ವಪಥ

(3) ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ

(4) ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ

72. 'ಯಾರ ಜಪ್ತಿಗೂ ಸಿಗದ ನವಿಲುಗಳು' ಇದು ಇವರ ಸಾಹಿತ್ಯವನ್ನು ಕುರಿತ ವಿಮರ್ಶಾ ಲೇಖನಗಳ ಸಂಕಲನ.

(1) ಪೂರ್ಣಚಂದ್ರ ತೇಜಸ್ವಿ

(2) ದೇವನೂರ ಮಹಾದೇವ

(3) ಪಿ. ಲಂಕೇಶ್

(4) ಡಾ. ಯು.ಆರ್. ಅನಂತಮೂರ್ತಿ

73. ಕೆಳಗಿನ ಕವಿಗಳನ್ನು ಮತ್ತು ಅವರ ಕವನಗಳನ್ನು ಸರಿಹೊಂದಿಸಿರಿ.

| ಕವಿಗಳು | ಕವನಗಳು |
|---|---|
| (A) ರಾಮಚಂದ್ರ ಶರ್ಮ | (i) ಹೇಳತೇನ ಕೇಳ |
| (B) ಸರ್ವ ಮಂಗಳಾ | (ii) ಪಾಂಡು ಮಾದ್ರಿ |
| (C) ಸಿದ್ದಲಿಂಗಯ್ಯ | (iii) ಅಮ್ಮನ ಗುಡ್ಡ |
| (D) ಚಂದ್ರಶೇಖರ ಕಂಬಾರ | (iv) ಅಲ್ಲೇ ಕುಂತವರೆ |

ಸರಿ ಉತ್ತರವನ್ನು ಆಯ್ಕೆ ಮಾಡಿ:

| | (A) | (B) | (C) | (D) |
|---|---|---|---|---|
| (1) | (ii) | (iii) | (iv) | (i) |
| (2) | (iii) | (i) | (ii) | (iv) |
| (3) | (iv) | (i) | (ii) | (iii) |
| (4) | (i) | (ii) | (iv) | (iii) |

74. ಕೆಳಗಿನ ಸಾಹಿತಿಗಳನ್ನು ಮತ್ತು ಅವರು ಕೃಷಿ ಮಾಡಿದ ಸಾಹಿತ್ಯ ಕ್ಷೇತ್ರವನ್ನು ಸರಿಹೊಂದಿಸಿರಿ.

| ಸಾಹಿತಿಗಳು | ಕೃಷಿ ಮಾಡಿದ ಸಾಹಿತ್ಯ ಕ್ಷೇತ್ರ |
|---|---|
| (A) ಶಂ.ಬಾ. ಜೋಶಿ | (i) ಜಾನಪದ |
| (B) ಡಿ.ಎಲ್. ನರಸಿಂಹಾಚಾರ್ | (ii) ಸಂಶೋಧನೆ |
| (C) ಹಾ.ಮಾ. ನಾಯಕ | (iii) ಗ್ರಂಥ ಸಂಪಾದನೆ |
| (D) ಜೀ.ಶಂ. ಪರಮಶಿವಯ್ಯ | (iv) ಅಂಕಣ ಸಾಹಿತ್ಯ |

ಸರಿ ಉತ್ತರವನ್ನು ಆಯ್ಕೆ ಮಾಡಿ:

| | (A) | (B) | (C) | (D) |
|---|---|---|---|---|
| (1) | (ii) | (i) | (iv) | (iii) |
| (2) | (iv) | (i) | (ii) | (iii) |
| (3) | (iii) | (iv) | (i) | (ii) |
| (4) | (ii) | (iii) | (iv) | (i) |

75. ಭಟ್ಟಾಕಳಂಕದೇವ ಬರೆದ ಪ್ರೌಢವಾದ ಕನ್ನಡ ವ್ಯಾಕರಣ ಗ್ರಂಥ:

(1) ಶ್ರೀ ವಾಗ್ದೇವಿ ಶಬ್ದ

(2) ಶಬ್ದಮಣಿದರ್ಪಣ

(3) ಶಬ್ದಾನುಶಾಸನ

(4) ಶಬ್ದಮಣಿಶಾಸನ

76. ಭೀಮಕವಿ ಬಸವಪುರಾಣವನ್ನಲ್ಲದೆ ಮತ್ತೊಂದು ಕೃತಿ ರಚಿಸಿದ್ದಾನೆ ಅದು ಯಾವುದು?

(1) ಜಂಗಮ ರಗಳೆ

(2) ಷಡಕ್ಷರ ರಗಳೆ

(3) ಪರಮಾರ್ಥ ಗೀತೆ

(4) ಲಿಂಗಾರ್ಚನ ರಗಳೆ


www.kpscvaani.com

77. 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂಬ ಹೇಳಿಕೆಯನ್ನು ನೀಡಿರುವ ಕವಿ.
   (1) ನಾಗಚಂದ್ರ
   (2) ನಾಗವರ್ಮ
   (3) ನಾಗರಾಜ
   (4) ನೇಮಿಚಂದ್ರ

78. ಕನ್ನಡದಲ್ಲಿ ಪ್ರಥಮ 'ವೈದಿಕರಾಮಾಯಣ'ವನ್ನು ಬರೆದಿರುವ ಕವಿ–ಕೃತಿ:
   (1) ನಾಗಚಂದ್ರ – ಪಂಪರಾಮಾಯಣ
   (2) ಕುಮದೇಂದು –ಕುಮದೇಂದು ರಾಮಾಯಣ
   (3) ಕುಮಾರವಾಲ್ಮೀಕಿ –ತೊರವೆ ರಾಮಾಯಣ
   (4) ನಾರಾಯಣ –ಉತ್ತರ ರಾಮಾಯಣ

79. 'ಖಡ್ಗವಾಗಲಿ ಕಾವ್ಯ–ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಈ ಘೋಷವಾಕ್ಯ ಯಾವ ಸಾಹಿತ್ಯ ಚಳವಳಿಗೆ ಸಂಬಂಧಪಟ್ಟದ್ದು:
   (1) ನವೋದಯ
   (2) ದಲಿತ–ಬಂಡಾಯ
   (3) ನವ್ಯ
   (4) ಪ್ರಗತಿಶೀಲ

80. "ಸಾಹಿತಿಯ ಜೀವನಚರಿತ್ರೆ ತಿಳಿಯುವುದು ಅವಶ್ಯಕ" ಎಂದವರು ಯಾರು?
   (1) ಕೆ. ಮೆಕೆಂಜಿ
   (2) ಮೇರಿ ಫ್ರೆರೆ
   (3) ಹರ್ಮನ್ ಮೋಗ್ಲಿಂಗ್
   (4) ರಾಬರ್ಟ್ ಸ್ಪಿಲ್ಲರ್

81. ನಿಯತವಾದ ಪಾದ ಸಂಖ್ಯೆಯಿಲ್ಲದುದು ಯಾವ ಛಂದೋಪ್ರಕಾರ?
   (1) ರಗಳೆ
   (2) ಸಾಂಗತ್ಯ
   (3) ಷಟ್ಪದಿ
   (4) ಕಂದ

82. "ಕವಿರಾಜಹಂಸ" ಬಿರುದನ್ನು ಹೊಂದಿದವರು ಯಾರು?
   (1) ಕುಮಾರವಾಲ್ಮೀಕಿ
   (2) ಲಕ್ಷ್ಮೀಶ
   (3) ಚಾಟು ವಿಠಲನಾಥ
   (4) ನಿಜಗುಣ ಶಿವಯೋಗಿ

83. "ತತ್ವಸುವ್ವಾಲಿ"ಯ ಛಂದಸ್ಸು ಯಾವುದು?
   (1) ಸಾಂಗತ್ಯ
   (2) ವಚನ
   (3) ಷಟ್ಪದಿ
   (4) ತ್ರಿಪದಿ

84. ಕನ್ನಡ ಜನಪದ ಮಹಾಕಾವ್ಯಗಳನ್ನು ಈ ಕೆಳಗಿನವರಲ್ಲಿ ಉಳಿಸಿಕೊಂಡು ಬಂದವರು ಯಾರು?
   (1) ಭಿಲ್ಲರು
   (2) ತೋಡರು
   (3) ಸೋಲಿಗರು
   (4) ನೀಲಗಾರರು

85. "ನಾ ಕಂಡ ಪಡುವಣ" ಕೃತಿಯ ಕರ್ತೃ ಯಾರು?
   (1) ದಿನಕರ ದೇಸಾಯಿ
   (2) ವಿ.ಕೃ. ಗೋಕಾಕ್
   (3) ವಿ.ಎಂ. ಇನಾಂದಾರ್
   (4) ಅಶ್ವತ್ಥ


www.kpscvaani.com

86. "ಪಾ.ವೆಂ. ಆಚಾರ್ಯ"ರವರ ಕೃತಿ ಯಾವುದು?

(1) ದಮಯಂತಿ

(2) ನವನೀರದ

(3) ಸತ್ಯ ಪ್ರಮಾಣ

(4) ಇಣುಕು ನೋಟ

87. "ಗೆಜ್ಜೆಯ ಹೆಜ್ಜೆನುಡಿ" ಇದು ಸಾಹಿತ್ಯದ ಯಾವ ಪ್ರಕಾರ?

(1) ಆತ್ಮಚರಿತ್ರೆ

(2) ಜೀವನಚರಿತ್ರೆ

(3) ಪ್ರವಾಸ ಕಥನ

(4) ಕಥನ ಕವನ

88. "ಈಗಳ್ ನೀನೇನ್ ಸತ್ತೆಯೊ ಸಾಯೆಯೊ ಮತ್ತೇನೊ ಎನೆ ದೇವಾ ನೀಂ ಗೆಲ್ದೆಯಾಂ ಸೋಲ್ತೆನುಂ ಸತ್ತೆನುಂ" ಈ ಸೊಗಸಾದ ಗದ್ಯ ಯಾವ ಕೃತಿಯದು?

(1) ಚಾವುಂಡರಾಯ ಪುರಾಣ

(2) ವಡ್ಡಾರಾಧನೆ

(3) ವಿಕ್ರಮಾರ್ಜುನ ವಿಜಯಂ

(4) ಸಾಹಸಭೀಮ ವಿಜಯಂ

89. ಉದಾತ್ತ ಶೃಂಗಾರದ, ಜನ್ಮಾಂತರಗಳ ಜಟಿಲ ಕಥಾನಕದ, ಉನ್ನತ ಪ್ರೇಮದ ಸ್ವಪ್ನತಮ ಚಿತ್ತವನ್ನೊಳಗೊಂಡ ಹಳೆಗನ್ನಡ ಕೃತಿ:

(1) ಲೀಲಾವತಿ ಪರಿಣಯ

(2) ಪಾರ್ವತಿ ಪರಿಣಯ

(3) ಕರ್ಣಾಟಕ ಕಾದಂಬರಿ

(4) ಗಿರಿಜಾ ಕಲ್ಯಾಣ

90. 'ಸ್ಪೀಕಿಂಗ್ ಆಫ್' ಶಿವ ಕೃತಿಯು

(1) ವಚನ ಸಾಹಿತ್ಯ ಅನುವಾದ

(2) ಶಿವಸಾಕ್ಷತ್ಕಾರದ ಪರಿಚಯ

(3) ಮೂರ್ತಿ ಆರಾಧನಾ ಕೃತಿ

(4) ಶಿವನ ನುಡಿಮುತ್ತುಗಳ ಸಂಗ್ರಹ

91. ಅದೃಶ್ಯ !
ಹೌದು ;
ನಾನು ಗೋವು ತಿಂದು
ಗೋವಿನಂತಾದವನು
ನೀವು ನೀಡುವ ಮೇವು ತಿಂದು
ನಿಮ್ಮಂಥ ಮನುಷ್ಯನಾಗಲಾರೆ
ಮನುಷ್ಯನನ್ನು ತಿನ್ನಲಾರೆ.

ಎನ್. ಕೆ. ಹನುಮಂತಯ್ಯನವರ ಈ ಕವಿತೆಯಲ್ಲಿ ಕಾಣುವ ಪ್ರಧಾನಭಾವ:

(1) ನೋವು ಮತ್ತು ಪ್ರತಿಭಟನೆ

(2) ನಾಚಿಕೆ ಮತ್ತು ಕನಸು

(3) ಸ್ವಾಭಿಮಾನ ಮತ್ತು ದೃಢತೆ

(4) ಬೇಸರ ಮತ್ತು ತಳಮಳ


www.kpscvaani.com

92. "ಕಾಳಿದಾಸನ 'ಶಾಕುಂತಲ' ನಾಟಕದ ಶಕುಂತಲೆ ಆಶ್ರಮವನ್ನು ತೊರೆದು ಗಂಡನ ಮನೆಗೆ ಹೊರಟಿದ್ದಾಳೆ. ಪಶುಪಕ್ಷಿಗಳು ಕೊನೆಗೆ ತರುಮರಗಳೂ ಆ ದು:ಖದಲ್ಲಿ ಭಾಗಿಯಾಗಿವೆ. ಮಹರ್ಷಿ ಕಣ್ವರು ತಾವೂ ಕಣ್ಣೀರು ಮಿಡಿಯುತ್ತಾರೆ. ಈಗ ಈ ನಾಟಕವನ್ನು ನೋಡುತ್ತಿರುವ ತಾಯಿಯೊಬ್ಬಳಿಗೆ ಇದನ್ನು ನೋಡಿ ಗಂಡನ ಮನೆಯಲ್ಲಿರುವ ತನ್ನ ಮಗಳ ನೆನಪು ಬಂದು ಕಣ್ಣೀರು ಬರಬಹುದು. ಇತರರಿಗಿಂತ ಗಾಢವಾದ ಅನುಭವವನ್ನು ಆ ಹೊತ್ತಿನಲ್ಲಿ ಆಕೆ ಪಡೆದರೂ ಅದು ಕಲಾತ್ಮಕ ಅನುಭವವಲ್ಲ."

ಈ ವೃತ್ತಾಂತ ಕಲಾನುಭವದ ಯಾವ ಪರಿಕಲ್ಪನೆಯನ್ನು ಹೇಳುತ್ತಿದೆ?

(1) ಅವಸ್ಥಾನುಕೃತಿರ್ನಾಟ್ಯಂ
(2) ಮಾನಸಿಕ ದೂರ
(3) ಸೌಂದರ್ಯಾನುಭವ
(4) ಸಹೃದಯತೆ

93. ಮಾಸ್ತಿಯವರು ರಚಿಸಿರುವ 'ಗೌಡರಮಲ್ಲಿ' ಒಂದು ________

(1) ಭಾವಗೀತೆ
(2) ಕಥನ ಕವನ
(3) ಸಣ್ಣಕಥೆ
(4) ಸಾನೆಟ್

94. ಊರ್ಮಿಳೆ ಸ್ವತಂತ್ರ ವ್ಯಕ್ತಿತ್ವ ಪಡೆದಿರುವ ಕಾವ್ಯ:
(1) ಶ್ರೀರಾಮ ಪಟ್ಟಾಭಿಷೇಕ
(2) ಶ್ರೀರಾಮಾಯಣ ದರ್ಶನಂ
(3) ರಾಮಾಶ್ವಮೇಧ
(4) ಅದ್ಭುತ ರಾಮಾಯಣ

95. "ಶಿವಾನುಭವ ಶಬ್ದಕೋಶ" ಬರೆದವರು
(1) ಫ.ಗು.ಹಳಕಟ್ಟಿ
(2) ವಿರಕ್ತ ತೋಂಟದಾರ್ಯ
(3) ಸ.ಸ. ಮಾಳವಾಡ
(4) ಮತದ ರುದ್ರಯ್ಯ

96. ಕನ್ನಡದಲ್ಲಿ ದರ್ಶನ ವಿಮರ್ಶೆಯನ್ನು ಮೊದಲು ಬರೆದವರು:
(1) ತೀ.ನಂ.ಶ್ರೀ
(2) ಎಚ್. ತಿಪ್ಪೇರುದ್ರಸ್ವಾಮಿ
(3) ಕುವೆಂಪು
(4) ಜಿ.ಎಸ್. ಶಿವರುದ್ರಪ್ಪ

97. 'ಜಾನಪದ ಸಂಪದ' ಅಭಿನಂದನ ಗ್ರಂಥ ಯಾರದು?
(1) ಎಂ.ಎಸ್. ಸುಂಕಾಪುರ
(2) ಜಿ.ಶಂ. ಪರಮಶಿವಯ್ಯ
(3) ಹಾ.ಮಾ. ನಾಯಕ
(4) ಹಂ.ಪ. ನಾಗರಾಜಯ್ಯ

98. ಇದು ಕನ್ನಡದ ಮೊದಲ ಅಸಂಗತ ನಾಟಕ:
(1) ಇಲಿಬೋನು
(2) ಬೊಕ್ಕತಲೆಯ ನರ್ತಕಿ
(3) ಉದರ ವೈರಾಗ್ಯ
(4) ಟಿಂಗರ ಬುಡ್ಡಣ್ಣ

99. 'ನಾನಿನಗೇನು ಬೇಡುವುದಿಲ್ಲ – ಎನ್ನ ಹೃದಯ ಕಮಲದೊಳು ನೆಲೆಸಿರು ಹರಿಯೆ' ಕೀರ್ತನೆಯ ಕರ್ತೃ:
(1) ಪುರಂದರದಾಸರು
(2) ಕನಕದಾಸರು
(3) ಶ್ರೀಪಾದರಾಯರು
(4) ವ್ಯಾಸರಾಯರು

100. 'ಗೋಕಾಕ್ ಕವನಗಳು' ಕರ್ತೃ:
(1) ಕೆ.ಎನ್. ಶಿವತೀರ್ಥನ್
(2) ವಿ.ಕೃ. ಗೋಕಾಕ್
(3) ಬಿ.ಟಿ. ಲಲಿತಾನಾಯಕ್
(4) ಅಬ್ದುಲ್ ರಶೀದ್


www.kpscvaani.com

## SPACE FOR ROUGH WORK


www.kpscvaani.com

## SPACE FOR ROUGH WORK


www.kpscvaani.com